ಸಿ.ಸಿ.ನಂ.17/2022
ಪಿ.ಡಬ್ಲ್ಯೂ-1
ಸಿ.ಡಬ್ಲ್ಯೂ-1

ದಿನಾಂಕ.03-03-2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣಿ ಕರಿಸಲಾಯಿತು.

**ಮುಂದುವರಿದ ಪಾಟಿ ಸವಾಲುಃ ಆರೋಪಿಗಳ** ಪರ ಶ್ರೀ ಎನ್ ಆರ್ ಎನ್ . ವಕೀಲರಿಂದಃ

24. ಆ ದಿನ ಆರೋಪಿ 2 ಮತ್ತು 3 ರವರನ್ನು ಬಂಧಿಸಿಲ್ಲ ಹಾಗೂ ಅವರಿಂದ ಯಾವುದೆ ಮಾಂಸವನ್ನು ವಶಪಡಿಸಿಲ್ಲ ಹಾಗೂ ಯಾವುದೆ ಪಂಚರು ಕೂಡ ಹಾಜರಿರಲಿಲ್ಲ ಹಾಗೂ ಯಾವುದೆ ಕೈ ಚೀಲದಲ್ಲಿ ಮಾಂಸ ಇರಲಿಲ್ಲ ಎಂದರೆ ಸರಿಯಲ್ಲ. ಸ್ಥಳದಲ್ಲಿ ಯಾವುದೆ ಮಾಂಸ ಹಾಗೂ ಮುದ್ದೆ ಮಾಲುಗಳನ್ನು ಜಪ್ತಿ ಮಾಡಿಲ್ಲ ಎಂದರೆ ಸರಿಯಲ್ಲ. ಮಾಂಸ ಹಾಗೂ ಮುದ್ದೆ ಮಾಲುಗಳನ್ನು ನಮ್ಮ ಇಲಾಖೆಯಲ್ಲಿ ಸೃಷ್ಟಿ ಮಾಡಿಕೊಂಡದ್ದು ಎಂದರೆ ಸರಿಯಲ್ಲ. 2 ಮತ್ತು 3 ನೇ ಆರೋಪಿಗಳು ಸ್ಥಳದಲ್ಲಿ ಹೇಳಿದರು ಎಂದು ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿರುವಂತ ವಿಚಾರಗಳೆಲ್ಲಾ ಈ ಪ್ರಕರಣದಲ್ಲಿ ನಾನು ಸೃಷ್ಟಿಸಿದ ಕಟ್ಟು ಕತೆಗಳು ಎಂದರೆ ಸರಿಯಲ್ಲ.

25. ನಾನು ಆರೋಪಿಗಳನ್ನು ಹಿಡಿದೆ ಎಂದು ಹೇಳುವ ಸ್ಥಳಕ್ಕೂ 1 ನೇ ಆರೋಪಿ ಇದ್ದ ಎಂದು ಹೇಳುವ ಸ್ಥಳಕ್ಕೂ ಒಂದೂವರೆ ಕಿ ಮೀ ಅಂತರ ಇತ್ತು. 1 ನೇ ಆರೋಪಿ ಇದ್ದರು ಎಂದು ನಾನು ಹೇಳುವ ಸ್ಥಳ ನಾನು ಹೇಳಿದಂತ 2 ಮತ್ತು 3 ನೇ ಆರೋಪಿ ಇದ್ದರು ಎಂದು ಹೇಳುವ ಘಟನಾ ಸ್ಥಳಕ್ಕೆ ಉತ್ತರ ದಿಕ್ಕಿನಲ್ಲಿ ಇದೆ. ನಾನು ಹೇಳುವಂತ ಆ ಘಟನಾ ಸ್ಥಳದ ಪೂರ್ವ ದಿಕ್ಕಿಗೆ ಕಂಚಿನಬಾಗಿಲು ದೇವಸ್ಥಾನ ಇದೆ. ನಾನು ಹೇಳುವಂತ ಆ ಘಟನಾ ಸ್ಥಳದ ದಕ್ಷಿಣ ದಿಕ್ಕಿಗೆ ನಾನು ಹೇಳಿದಂತ ಚೀಲ ಇತ್ತು. ಪಂಚನಾಮೆಯಲ್ಲಿ ನಾನು ಹೇಳಿರುವ ಘಟನಾ ಸ್ಥಳ ಚೀಲ ಇದ್ದ ಸ್ಥಳ ಆಗಿರುತ್ತದೆ. ಆರೋಪಿಗಳನ್ನು ಬಂಧಿಸಿದ ಸ್ಥಳದಲ್ಲಿ ಪಂಚನಾಮೆ ಬರೆದಿಲ್ಲ, ಅಲ್ಲಿಂದ ಅವರನ್ನು ಚೀಲ ಇದ್ದ ಸ್ಥಳಕ್ಕೆ ಕರೆದುಕೊಂಡು ಬಂದು ಪಂಚನಾಮೆ ಮಾಡಲಾಯಿತು. ನಾನು ಮಾಡಿದೆ ಎಂದು ಹೇಳುವ ಪಂಚನಾಮೆ ರನ್ನಿಂಗ್

ಪಂಚನಾಮೆ ಎಂದರೆ ಸರಿ. ಆರೋಪಿಗಳನ್ನು ಬಂಧಿಸಿದೆ ಎಂದು ಹೇಳುವ ಸ್ಥಳದ ನಾಲ್ಕು ದಿಕ್ಕಿಗೂ ಅರಣ್ಯ ಪ್ರದೇಶ ಇದ್ದು, ಅದರ ಸರ್ವೆ ನಂಬರ 26 ಆಗಿರುತ್ತದೆ.

26. ನಾನು ಹೇಳಿದಂತ ಬ್ರಿಡ್ಜ್ ನ ಮುಂದೆ ಉತ್ತರಕಾದಂತೆ ಮಾಲ್ಕಿ ಜಮೀನು ಇದೆ ಎಂದರೆ ಸರಿ. ಆ ಮಾಲ್ಕಿ ಜಮೀನು ರಾಷ್ಟ್ರೀಯ ಹೆದ್ದಾರಿಗೆ ಹೊಂದಿಕೊಂಡಂತೆ ಇದೆ ಎಂದರೆ ಸರಿ. ಆ ಜಮೀನು 10 ಎಕರೆಯಷ್ಟಿದೆ ಎಂದರೆ ಸಾಕ್ಷಿ 3 ಎಕರೆ ಇರಬಹುದು ಎಂದು ನುಡಿಯುತ್ತಾರೆ. ಆ ಮಾಲ್ಕಿ ಜಮೀನಿನ ಆದ ನಂತರ ಲಗತ್ತ ಆಗಿ ರಸ್ತೆ ಉತ್ತರ ದಿಕ್ಕಿಗೆ ನಾನು ಹೇಳಿದಂತ ಬಸ್ ನಿಲ್ದಾಣದ ಪಕ್ಕದಿಂದ ಹಾದು ಹೋಗುತ್ತದೆ ಎಂದರೆ ಸರಿ. ಆ ರಾಷ್ಟ್ರೀಯ ಹೆದ್ದಾರಿಗೆ ಲಗತ್ತ ಇರುವ ಆ ಜಮೀನು ಅಂಕೋಲಾದ ಕಡೆಗೆ ಸಾವಿರ ಮೀಟರ ತನಕ ಇದೆ ಎಂದರೆ ಸಾಕ್ಷಿ 500 ರಿಂದ 600 ಮೀಟರ ತನಕ ಇದೆ ಎಂದು ನುಡಿಯುತ್ತಾರೆ. ಈ ಪ್ರಕರಣದಲ್ಲಿ ತೊಂದರೆಯಾಗುತ್ತದೆ ಎಂದು 500 ರಿಂದ 600 ಮೀಟರ ಮಾತ್ರ ಇದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಬಸ್ ನಿಲ್ದಾಣವನ್ನು ಕಂದಾಯ ಪಡ ಜಮೀನಿನಲ್ಲಿ ಮಾತ್ರ ನಿರ್ಮಿಸುತ್ತಾರೆ ಹಾಗೂ ಅರಣ್ಯ ಜಮೀನಿನಲ್ಲಿ ನಿರ್ಮಿಸಲು ಅನುಮತಿ ಇಲ್ಲ ಎಂದರೆ ಸರಿ. ಆ ಮಾಲ್ಕಿ ಜಮೀನು ಉತ್ತರಕಾದಂತೆ 600 ರಿಂದ 700 ಮೀಟರ ತನಕ ಇದೆ. ಬಸ್ ನಿಲ್ದಾಣ ಇರುವ ಜಮೀನು ಯಾವ ಸರ್ವೆ ನಂಬರನಲ್ಲಿ ಬರುತ್ತದೆ ಎಂದು ಮತ್ತು ಆ ಸರ್ವೆ ನಂಬರನಲ್ಲಿ ಎಷ್ಟು ಜಮೀನು ಇದೆ ಎಂದು ನನಗೆ ಗೊತ್ತಿಲ್ಲ.

27. ಕಂಚಿನಬಾಗಿಲು ದೇವಸ್ಥಾನ ಹಾಗೂ ಮೇಲ್ಕಡೆ ಹಿಂದೆ ಇರುವ ನರಸಿಂಹ ದೇವಸ್ಥಾನ ಅರಣ್ಯ ಜಮೀನಿನಲ್ಲಿ ಬರುತ್ತದೆ. ಅದರ ಸರ್ವೆ ನಂಬರ ನನಗೆ ಹೇಳಲು ಆಗುವುದಿಲ್ಲ. ನನಗೆ ಆ ಸ್ಥಳಗಳ

ಪರಿಕಲ್ಪನೆಯೇ ಇಲ್ಲ ಹಾಗೂ ನಾನು ಕಚೇರಿಯಲ್ಲಿ ಕುಳಿತು ಸೃಷ್ಟಿಸಿದ ಈ ಕೇಸಿನ ದಾಖಲೆಗಳು ಆಗಿರುವುದರಿಂದ ಈಗ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಎರಡು ದೇವಸ್ಥಾನಗಳಿಗೆ ಟ್ರಸ್ಟ್ ಇರುವುದು ನನಗೆ ಗೊತ್ತಿಲ್ಲ. ಅದಕ್ಕೆ ದಿವಂಗತ ಆರ್ ಎನ್ ನಾಯಕ್ ರವರು ಟ್ರಸ್ಟಿಗಳಾಗಿದ್ದರು ಹಾಗೂ ಆ ಟ್ರಸ್ಟ್‌ನ ನಾಮಪಲಕ ಅಲ್ಲಿ ಇದೆ ಎಂದರೆ ನಾನು ನೋಡಿಲ್ಲ, ಗೊತ್ತಿಲ್ಲ. ಕಂಚಿನಬಾಗಿಲು ದೇವಸ್ಥಾನ ಹಾಗೂ ನರಸಿಂಹ ದೇವಸ್ಥಾನವು ನಾನು ಚೀಲವನ್ನು ಜಪ್ತಿ ಮಾಡಿದೆ ಎಂದು ಹೇಳುವ ಸ್ಥಳದ ಪೂರ್ವಕ್ಕೆ ಬರುತ್ತದೆ. ನಾನು ಹೇಳುವಂತ ಚೀಲ ಹಿಡಿದ ಸ್ಥಳವಾದ ರಾಷ್ಟ್ರೀಯ ಹೆದ್ದಾರಿ ಪೂರ್ವದಿಂದ ಪಶ್ಚಿಮಕ್ಕೆ ಹಾದುಹೋಗುತ್ತದೆ. ಆ ಕಂಚಿನ ಬಾಗಿಲು ದೇವಸ್ಥಾನ ಅಂಕೋಲಾದಿಂದ ಹುಬ್ಬಳ್ಳಿಗೆ ಹೋಗುವಾಗ ಆ ರಾಷ್ಟ್ರೀಯ ಹೆದ್ದಾರಿಯಿಂದ ಎಡಕ್ಕೆ 15 ರಿಂದ 20 ಮೀಟರ ದೂರದಲ್ಲಿ ಇದೆ ಎಂದರೆ ಸರಿ. ಆ ದೇವಸ್ಥಾನದಿಂದ ಸುಮಾರು 15 ಮೀಟರ ಹಿಂದುಗಡೆ ನರಸಿಂಹ ದೇವಸ್ಥಾನ ಬರುತ್ತದೆ ಎಂದರೆ ಸರಿ.

28. ಆರೋಪಿಗಳನ್ನು ಅಲ್ಲಿ ಬಂಧಿಸಿದೆ ಎಂದು ಹೇಳುವ ಸಮಯ ಮಧ್ಯಾಹ್ನ 2-00 ರಿಂದ 3-00 ರ ಮಧ್ಯದಲ್ಲಿ, ಆದರೆ ನಿಖರ ಸಮಯ ಹೇಳಲು ಬರುವುದಿಲ್ಲ. ನಾನು ನೀಡಿದೆ ಎಂದು ಹೇಳುವ ಹೇಳಿಕೆಯನ್ನು ಆರೋಪಿಗಳನ್ನು ಬಂಧಿಸಿದ ಎಷ್ಟು ದಿನಕ್ಕೆ ನೀಡಿದ್ದೇನೆ ಎಂದು ನೆನಪಿಲ್ಲ. ಆರೋಪಿಗಳನ್ನು ಹಿಡಿದೆ ಎಂದು ಹೇಳುವ ನಿಖರ ಸಮಯ ನನ್ನ ಹೇಳಿಕೆಯಲ್ಲಿ ಹೇಳಿಲ್ಲ ಹಾಗೂ ಪಂಚನಾಮೆಯಲ್ಲಿ ಹೇಳಿಲ್ಲ. ಆರೋಪಿಗಳನ್ನು ಕರೆದುಕೊಂಡು ನಮ್ಮ ಕಚೇರಿಗೆ ಬಂದಾಗ ಮಧ್ಯಾಹ್ನ 3-30 ಆಗಿದೆ. ಆರೋಪಿಗಳನ್ನು ನನ್ನ ಸಮಕ್ಷಮ ಮೇಲಾಧಿಕಾರಿಗಳು ವಿಚಾರಣೆ ಮಾಡಿಲ್ಲ. ಸಾಕ್ಷಿ ಸ್ವತಃ

ಆಗ ಮೇಲಾಧಿಕಾರಿಗಳು ಅಲ್ಲಿ ಇರಲಿಲ್ಲ ಎಂದು ನುಡಿಯುತ್ತಾರೆ. ಮೇಲಾಧಿಕಾರಿಗಳಿಗೆ ಆರೋಪಿಗಳನ್ನು ಬಂಧಿಸಿದ ಬಗ್ಗೆ ತಿಳಿಸಬೇಕು ಎಂದರೆ ಸರಿ. ನಮ್ಮ ಕಚೇರಿಗೆ ತಾಗಿಕೊಂಡು ಆರ್ ಎಫ್ ಒ ರವರ ವಸತಿ ಗೃಹ ಬರುತ್ತದೆ ಎಂದರೆ ಸಾಕ್ಷಿ ಸ್ವಲ್ಪ ದೂರದಲ್ಲಿ ಅಂದರೆ 50 ರಿಂದ 60 ಮೀಟರ ದೂರದಲ್ಲಿ ಇದೆ ಎಂದು ನುಡಿಯುತ್ತಾರೆ. ನಾನು ಆರ್ ಎಫ್ ಒ ರವರನ್ನು ಆರೋಪಿಗಳನ್ನು ಕರೆದುಕೊಂಡು ಬಂದಾಗ ಭೇಟಿಯಾಗಿಲ್ಲ.

29. ಆರೋಪಿಗಳನ್ನು ಬಂಧಿಸಿದ ತಕ್ಷಣ ಆರ್ ಎಫ್ ಒ ರವರಿಗೆ ಹೇಳಿದ್ದೇನೆ. ಮಧ್ಯಾಹ್ನ 3-35 ಕ್ಕೆ ಆರೋಪಿಗಳನ್ನು ಕಚೇರಿಯಲ್ಲಿ ಬಿಟ್ಟು ನಾನು ಹೋರಟು ಹೋಗಿದ್ದೇನೆ. ಆರೋಪಿಗಳನ್ನು ಕ್ಲರ್ಕ ಹಾಗೂ ಜವಾನ ರವರ ವಶಕ್ಕೆ ಬಿಟ್ಟು ಹೋಗಿದ್ದೇನೆ. ಜಪ್ತು ಮಾಡಿದೆ ಎಂದು ಹೇಳುವ ವಸ್ತುಗಳನ್ನು ಕಚೇರಿಯಲ್ಲಿ ಕ್ಲರ್ಕ್ ಮತ್ತು ಜವಾನರಿಗೆ ಕೊಟ್ಟು ಬಂದಿದ್ದೇನೆ. ಕ್ಲರ್ಕ್ ಮತ್ತು ಜವಾನ ರಿಗೆ ಪ್ರಕರಣಗಳ ತನಿಖೆ ಕರ್ತವ್ಯ ಇರುವುದಿಲ್ಲ ಎಂದರೆ ಸರಿ. ಆರೋಪಿಗಳನ್ನು ವಶಕ್ಕೆ ತೆಗೆದುಕೊಳ್ಳುವ ಅಧಿಕಾರ ಕೂಡ ಅವರಿಗೆ ಇರುವುದಿಲ್ಲ ಎಂದರೆ ಸರಿ. ಮಧ್ಯಾಹ್ನ 3-45 ರಿಂದ 3-50 ಕ್ಕೆ ಚೀಲ ಜಪ್ತಿ ಮಾಡಿದೆ ಎಂದು ಹೇಳುವ ಸ್ಥಳಕ್ಕೆ ಬಂದಿರುತ್ತೇನೆ. ಕಚೇರಿಯಿಂದ ಹೊರಟಲ್ಲಿಂದ ಆ ಸಮಯಗಳಲ್ಲಿ ನನಗೆ ಉಳಿದ ಆರೋಪಿಗಳ ಬಗ್ಗೆ ಯಾವುದೆ ಮಾಹಿತಿ ಬಂದಿರುವುದಿಲ್ಲ. ನನಗೆ ಉಳಿದ ಆರೋಪಿಗಳು ಎಲ್ಲೆಲ್ಲಿ ಇದ್ದಾರೆ ಎಂದು ಹೇಳಿಲ್ಲ. ಸಾಕ್ಷಿ ಸ್ವತಃ ಮಾಂಸ ತೆಗೆದುಕೊಂಡು ಮನೆಗೆ ಹೋಗಿದ್ದಾರೆ ಎಂದು ಹೇಳಿದ್ದಾರೆ ಎಂದು ನುಡಿಯುತ್ತಾರೆ. ಚೀಲ ಜಪ್ತಿ ಮಾಡಿದೆ ಎಂದು ಹೇಳುವ ಸ್ಥಳದಿಂದ ಕಾಲು ದಾರಿ ಮೂಲಕ 1 ನೇ ಆರೋಪಿ ಮನೆಗೆ ಹೋಗಿದ್ದೇವೆ.

30. ಬಿ.ಡಿ.ಗೌಡ ರ ತೋಟದ ಪಶ್ಚಿಮಕ್ಕೆ ಆರೋಪಿ ಬಂಡೆ ಮೇಲೆ ಮಲಗಿದ್ದಾನೆ ಎಂದು ಹೇಳುವ ಸ್ಥಳ ಬರುತ್ತದೆ. ಆ ಸ್ಥಳ ನೀರಿನಿಂದ ಆವೃತ್ತವಾದ ಸ್ಥಳವಾಗಿರಲಿಲ್ಲ, ಖಾಲಿ ಬಂಡೆ ಇತ್ತು. ನಾನು ಹೇಳಿದಂತ ಹಳ್ಳದ ಮಧ್ಯದಲ್ಲಿ ಆ ಬಂಡೆ ಬರುತ್ತದೆ. ಬಿ.ಡಿ.ಗೌಡರ ತೋಟದ ಪಕ್ಕದಲ್ಲಿ ಆ ಬಂಡೆ ಇದ್ದ ಹಳ್ಳ ಹರಿಯುತ್ತಿಲ್ಲ. ಜುಲೈ, ಅಗಸ್ಟ್ ಮತ್ತು ಸೆಪ್ಟೆಂಬರ್ ತಿಂಗಳಲ್ಲಿ ಹಳ್ಳ ತುಂಬಾ ನೀರಿನಿಂದ ಹರಿಯುತ್ತದೆ ಎಂದರೆ ಸರಿ. ಬಿ.ಡಿ.ಗೌಡ ರ ತೋಟದ ಉತ್ತರ ದಿಕ್ಕಿನಿಂದ ಪೂರ್ವ ದಿಕ್ಕಿಗೆ ಸನ್ಯಾಸಿಮಡಿ ಹಳ್ಳ ಹರಿಯುತ್ತದೆ. ಆ ಹಳದ ಹರಿವು ತೀವ್ರತರವಾಗಿರುತ್ತದೆ ಎಂದರೆ ಸರಿ. ಆರೋಪಿಯನ್ನು ಬಂಧಿಸಿದೆ ಎಂದು ಹೇಳುವ ಹಳ್ಳಕ್ಕೆ ಹೆಸರು ಇಲ್ಲ. ಆ ಎರಡು ಹಳ್ಳಗಳು ಬಿ.ಡಿ.ಗೌಡ ರ ತೋಟದ ಪಕ್ಕದಲ್ಲಿ ಎಲ್ಲಿಯೂ ಸಂದಿಸುವುದಿಲ್ಲ. 1 ನೇ ಆರೋಪಿಯ ತೋಟ ಮತ್ತು ಬಿ.ಡಿ.ಗೌಡ ರ ತೋಟದ ಮಧ್ಯೆ ಆ ಎರಡು ಹಳ್ಳಗಳು ಹರಿಯುತ್ತವೆ. 1 ನೇ ಆರೋಪಿಯ ಮನೆ ಸದರಿ ಬಿ.ಡಿ.ಗೌಡ ರ ತೋಟದ ಪಶ್ಚಿಮ ದಿಕ್ಕಿಗೆ ಇದೆ. 1 ನೇ ಆರೋಪಿಯ ಮನೆಯು ಸರ್ವೆ ನಂ.26 ರಲ್ಲಿ ಇದ್ದು, ಸರ್ವೆ ನಂ.26 ಕ್ಕೆ ಹಿಸ್ಸಾ ಇರುವುದಿಲ್ಲ. ಬಿ.ಡಿ.ಗೌಡ ರ ಜಮೀನು ಖಾಸಗಿ ಜಮೀನಾಗಿದ್ದು, ಅದರ ಸರ್ವೆ ನಂಬರ ಗೊತ್ತಿಲ್ಲ. ಬಿ.ಡಿ.ಗೌಡ ರ ತೋಟ ಮತ್ತು ಜಮೀನು ಸುಮಾರು 1 ಎಕರೆಯಷ್ಟು ಇರಬಹುದು. ಅಲ್ಲಿ ಎರಡು ಮೂರು ಜನರ ಜಮೀನು ಕೂಡ ಇದೆ.

31. ಆ ಮೂರು ಜನರ ಜಮೀನಿನಲ್ಲಿ ಅವರ ಮನೆಗಳು ಇರುವುದಿಲ್ಲ. ಆದರೆ ಬಿ.ಡಿ.ಗೌಡ ರ ಜಮೀನಿನಲ್ಲಿ ಅವರ ಮನೆ ಇದೆ. ಕಡವೆ ವಾಸನಾಗ್ರಹಿ ಪ್ರಾಣಿ ಎಂದರೆ ಸರಿ. ಅದು ದೂರದಿಂದಲೂ ವಾಸನೆ ಗ್ರಹಿಸುತ್ತದೆ ಎಂದರೆ ಸರಿ. ಅದು ವ್ಯಕ್ತಿ ಕುಳಿತಲ್ಲಿಗೆ ಬರುವಂತ ಪ್ರಾಣಿ ಅಲ್ಲ ಎಂದರೆ ಸರಿ. ಆ

ಪ್ರಾಣಿಯನ್ನು ಕಾಡಿನಲ್ಲಿ ಹುಡುಕಿಕೊಂಡು ಹೋಗಬೇಕು ಎಂದರೆ ಸರಿ. 1 ನೇ ಆರೋಪಿ ಕುಳಿತುಕೊಂಡಿದ್ದ ಎಂದು ಹೇಳುವ ಸ್ಥಳ ನಾನು ನೋಡಿದ್ದೇನೆ. 1 ನೇ ಆರೋಪಿ ಕುಳಿತುಕೊಂಡಿದ್ದ ಎಂದು ಹೇಳುವ ಸ್ಥಳಕ್ಕೂ ಹಾಗೂ ನಾವು ಆತನನ್ನು ಬಂಧಿಸಿದೇವು ಎಂದು ಹೇಳುವ ಸ್ಥಳಕ್ಕೂ 50 ರಿಂದ 100 ಮೀಟರ ಅಂತರ ಇತ್ತು. ಆರೋಪಿಯನ್ನು ಹಿಡಿದೆ ಎಂದು ಹೇಳುವ ಸ್ಥಳದ ಪೂರ್ವ ದಿಕ್ಕಿಗೆ ಆತ ಕುಳಿತುಕೊಂಡಿದ್ದ ಎಂದು ಹೇಳುವ ಸ್ಥಳ ಬರುತ್ತದೆ. 1 ನೇ ಆರೋಪಿ ಕುಳಿತಿದ್ದ ಎಂದು ಹೇಳುವ ಸ್ಥಳದಿಂದ 30 ರಿಂದ 40 ಮೀಟರ್ ದೂರದಲ್ಲಿ ಕಡವೆ ಹಾದು ಹೋಗುತ್ತಿತ್ತು ಎಂದು ಹೇಳಿರುತ್ತಾರೆ. ಕಡವೆಗೆ ಗುಂಡು ತಗುಲಿದ ಸ್ಥಳ ನಮಗೆ ತೋರಿಸಿದ್ದಾರೆ. ಕಡೆವೆಗೆ ಗುಂಡು ಹೊಡೆದ ಸ್ಥಳ, ಗುಂಡು ತಗುಲಿದ ಸ್ಥಳ ಹಾಗೂ ಕಡವೆ ಸತ್ತು ಬಿದ್ದ ಸ್ಥಳಕ್ಕೆ ಹೋಗಿ ಪಂಚನಾಮೆ ಮಾಡಿದ್ದೇವೆ. ಕಡವೆಗೆ ಗುಂಡು ತಗುಲಿದೆ ಎನ್ನುವ ಸ್ಥಳದಿಂದ ಅದು ಸತ್ತು ಬಿದ್ದಿತ್ತು ಎಂದು ಹೇಳುವ ಸ್ಥಳದ ಮದ್ಯೆ ಕಡವೆ ರಕ್ತ ಬಿದ್ದಿತ್ತು ಎಂದು ಪಂಚನಾಮೆಯಲ್ಲಿ ನಮೂದಿಸಿಲ್ಲ. ನಾವು ರಕ್ತ ಬಿದ್ದ ಕಲೆಗಳು ಇದ್ದ ಜಾಗ ನೋಡಿದ್ದೇವೆ. ಸುಮಾರು 5 ಮೀಟರ ತನಕ ರಕ್ತ ಬಿದ್ದಿತ್ತು. ರಕ್ತ ಬಿದ್ದ ಜಾಗಗಳು ತೊರಿಸುತ್ತಾ ಹೋಗುವಾಗ 1 ನೇ ಆರೋಪಿಯ ಬಲ ದಿಕ್ಕಿಗೆ ಇತ್ತು. ಆ ರೀತಿ ರಕ್ತ ಬಿದ್ದಿರುವ ವಿಚಾರಗಳನ್ನು ಪಂಚನಾಮೆಯಲ್ಲಿ ಹೇಳಲು ತೊಂದರೆ ಇರಲಿಲ್ಲ. ಆ ರೀತಿ ರಕ್ತ ಬಿದ್ದಿದೆ ಎಂದು ಹೇಳುವ ಸ್ಥಳವನ್ನು ಪಂಚರು ಕೂಡ ನೋಡಿದ್ದಾರೆ. ಪಂಚರು ಕೂಡ ಆ ರೀತಿ ರಕ್ತ ಬಿದ್ದಿರುವುದನ್ನು ನಮೂದಿಸಿ ಎಂದು ನನಗೆ ಹೇಳಿಲ್ಲ. ಅಲ್ಲಿ ರಕ್ತ ಹೆಪ್ಪುಗಟ್ಟಿ ಉಂಡೆಯಾಗಿರುವಂತೆ ಇರಲಿಲ್ಲ.

32. ನಾನು ಹೇಳಿದಂತ ಸತ್ತು ಬಿದ್ದ ಕಡವೆ ಸನ್ಯಾಸಿಮಡಿ ಹಳ್ಳದ ಹತ್ತಿರ ಬಿದ್ದಿತ್ತು. ಆ ಹಳ್ಳದ ಒಳಗಡೆ ನೀರು ಹರಿಯುವ ಜಾಗ ಬಿಟ್ಟು ಉಳಿದ ಜಾಗದಲ್ಲಿ ಬಿದ್ದಿತ್ತು. ಆ ಹಳ್ಳದ ಉತ್ತರಕ್ಕೆ ಹರಿಯುವ ಕಡೆ ಮುಖ ಮಾಡಿ ನಿಂತಾಗ ನಮ್ಮ ಎಡಗಡೆಗೆ ಆ ಕಡವೆ ಬಿದ್ದಿತ್ತು. ನಾವು ಪೂರ್ವದ ಕಡೆ ಮುಖ ಮಾಡಿಕೊಂಡು ಯಲ್ಲಾಪುರದ ಕಡೆ ಹೋಗಿರುತ್ತೇವೆ. ಆ ಕಡವೆ ಯಲ್ಲಾಪುರದ ಕಡೆಗೆ ಬಿದ್ದಿತ್ತು. ಅದು ಬಿದ್ದಿತ್ತು ಎಂದು ಹೇಳುವ ಸ್ಥಳದಲ್ಲಿ ಪಂಚನಾಮೆ ಮಾಡಿದ್ದೇವೆ. ಆ ಬಿದ್ದಿದ್ದ ಸ್ಥಳದಲ್ಲೂ ಕೂಡ ರಕ್ತದ ಬಿಂದುಗಳು ತುಂಬಾ ಬಿದ್ದಿತ್ತು. ಆ ವಿಚಾರವನ್ನು ಕೂಡ ಪಂಚನಾಮೆಯಲ್ಲಿ ಹೇಳಿಲ್ಲ.

33. ಬಿದ್ದಿದ್ದ ಸ್ಥಳದಿಂದ ತೆಗೆದುಕೊಂಡು ಬಂದು ಕಡವೆಯನ್ನು ಮಾಂಸ ಆಗಿ ಪರಿವರ್ತಿಸಿದ ಜಾಗವನ್ನು ನೋಡಿದ್ದೇವೆ. ಅದನ್ನು ಆ ಹಳ್ಳದಲ್ಲಿ ಆ ಕಡವೆ ಬಿದ್ದಿದ್ದ ಸ್ಥಳದಲ್ಲಿ ಮಾಂಸವನ್ನಾಗಿ ಮಾಡಿದ್ದಾರೆ. ಹಳ್ಳದ ಎರಡು ಬದಿ ಕೂಡ ಕೆಸರು ತುಂಬಿದ ಜಾಗ ಆಗಿರುತ್ತದೆ ಎಂದರೆ ಸಾಕ್ಷಿ ಅಲ್ಲಿ ಆ ರೀತಿ ಇರಲಿಲ್ಲ ಎಂದು ನುಡಿಯುತ್ತಾರೆ. ಹಳ್ಳ ದ ಎರಡು ಬದಿ ಕೂಡ ಸಾಕಷ್ಟು ತಂಪಾಗಿರುವ ಪ್ರದೇಶ ಎಂದರೆ ಸರಿ. ಮಾಂಸವಾಗಿ ಪರಿರ್ವತಿಸಲಾಗಿದೆ ಎಂದು ಹೇಳುವ ಸ್ಥಳದಲ್ಲಿ ಮಾಂಸದ ಚಿಕ್ಕ ಚಿಕ್ಕ ತುಣುಕುಗಳು, ಎಲುಬಿನ ಚಿಕ್ಕ ತುಣುಕುಗಳು ಹಾಗೂ ಎಲುಬಿನ ಅಸ್ಥಿಮಜ್ಜೆಗಳು ಕಂಡುಬಂದಿಲ್ಲ. ಆ ಸ್ಥಳದಲ್ಲಿ ಕಡವೆಯ ಕೂದಲುಗಳು ಕಂಡುಬಂದಿದ್ದವು. ಕೂದಲುಗಳನ್ನು ಜಪ್ತು ಪಡಿಸಿಲ್ಲ. ಆ ಸ್ಥಳದಲ್ಲಿ ಹೆಜ್ಜೆ ಗುರುತುಗಳು ಇರಲಿಲ್ಲ ಹಾಗೂ ಮಾಂಸ ಮಾಡುವಾಗ ಬಲಪ್ರಯೋಗದಿಂದ ಬಲವಾದ ಹೊಡೆತ ನೀಡುವಾಗ ಆ ಬಗ್ಗೆ ಮಣ್ಣಿನಲ್ಲಿ ಕುರುಹುಗಳು ಕಂಡುಬಂದಿಲ್ಲ. ಸಾಕ್ಷಿ ಸ್ವತಃ ಅಲ್ಲಿ ಚಿಕ್ಕ ಚಿಕ್ಕ ಕಲ್ಲುಗಳು

ಇದ್ದವು ಎಂದು ನುಡಿಯುತ್ತಾರೆ.ಚಿಕ್ಕ ಚಿಕ್ಕ ಕಲ್ಲುಗಳು ಇದ್ದ ಜಾಗದಲ್ಲಿ ಮಾಂಸ ತಯಾರಿಸಿದ್ದು ಎಂದು ಪಂಚನಾಮೆಯಲ್ಲಿ ಹೇಳಿಲ್ಲ.

34. ಕಡವೆಗೆ ಬ್ಯಾಕ್ ಬೋನ್ ದೊಡ್ಡದಾಗಿರುತ್ತದೆ ಎಂದರೆ ಸರಿ. ಆ ಬೋನ್‌ನ್ನು ತುಂಡು ಮಾಡಬೇಕಾದರೆ ಕೊಡಲಿಯಂತ ಆಯುಧ ಬೇಕು ಎಂದರೆ ಸಾಕ್ಷಿ ಕತ್ತಿಯಿಂದ ತುಂಡು ಮಾಡಬಹುದು ಎಂದು ನುಡಿಯುತ್ತಾರೆ.ದಪ್ಪ ವಸ್ತುಗಳನ್ನು ಕತ್ತಿಯಿಂದ ಕತ್ತರಿಸಲು ಹೋದಾಗ ಆ ಕತ್ತಿಯ ಅಲಗು ಮೊಂಡಾಗುತ್ತದೆ ಹಾಗೂ ಮಣಿಯುತ್ತದೆ ಎಂದರೆ ಸರಿ. ದೊಡ್ಡ ಪ್ರಾಣಿಯ ಮಾಂಸವನ್ನು ಕತ್ತರಿಸಲು ಮರದ ಬೊಡ್ಡೆಗಳು ಬೇಕಾಗುತ್ತದೆ ಎಂದರೆ ಸಾಕ್ಷಿ ಮಣ್ಣಿನಲ್ಲಿ ಇಟ್ಟು ಕತ್ತರಿಸಬಹುದು ಎಂದು ನುಡಿಯುತ್ತಾರೆ. ನಾವು ಜಪ್ತು ಮಾಡಿದೆವು ಎಂದು ಹೇಳುವ ಮಾಂಸದಲ್ಲಿ ದೊಡ್ಡ ಎಲುಬುಗಳು ಇರಲಿಲ್ಲ , ಆ ಮಾಂಸದ ತುಣುಕುಗಳಲ್ಲಿ ಇದ್ದಂತ ಚಿಕ್ಕ ಎಲುಬುಗಳು ಇದ್ದವು. ದೊಡ್ಡ ದೊಡ್ಡ ಎಲುಬುಗಳನ್ನು ಬಿಸಾಡಿದ ಬಗ್ಗೆ ಆರೋಪಿಗಳು ನಮಗೆ ಹೇಳಿಲ್ಲ ಹಾಗೂ ಆ ಬಗ್ಗೆ ನಾವು ವಿಚಾರಣೆ ಕೂಡ ಮಾಡಿಲ್ಲ. ಸಾಕು ಪ್ರಾಣಿಗಳಿಗಿಂತ ಬಲಿಷ್ಟವಾದ ಬೋನ್ ಗಳನ್ನು ಕಡವೆ ಹೊಂದಿರುತ್ತವೆ ಎಂದರೆ ಸರಿಯಲ್ಲ.

35. ಎಂ ಒ 4 ಕತ್ತಿಯಲ್ಲಿ ಅದರ ಅಲಗು ಮಡಚಿರುವುದು ಹಾಗೂ ಸ್ವಲ್ಪ ಸ್ವಲ್ಪ ಮೊಂಡಾಗಿರುವುದು ಕಂಡುಬಂದಿರುವುದಿಲ್ಲ. ಕತ್ತಿ ರಕ್ತಸಿಕ್ತ ಆಗಿರಲಿಲ್ಲ. ಸಾಕ್ಷಿ ಸ್ವತಃ ಅದನ್ನು ತೊಳೆದಿದ್ದಾರೆ ಎಂದು ನುಡಿಯುತ್ತಾರೆ. ಅದು ರಕ್ತಸಿಕ್ತ ಆಗಿರಲಿಲ್ಲ, ಅದನ್ನು ತೊಳೆದು ಕೊಟ್ಟಿದ್ದಾರೆ ಎಂದು ಪಂಚನಾಮೆಯಲ್ಲಿ ಹೇಳಿಲ್ಲ. ಕಡವೆಯ ಹೊಟ್ಟೆ ಭಾಗಕ್ಕೆ ಗುಂಡು ತಗಲಿತ್ತು. ಆ ವಿಚಾರ ಪಂಚನಾಮೆಯಲ್ಲಿ ಬರೆದಿಲ್ಲ. ಅದರ ಚರ್ಮವನ್ನು ಪೂರ್ತಿಯಾಗಿ ಪ್ರತ್ಯೇಕಿಸಿದ್ದಾರೆ. ಗುಂಡು ತಗುಲಿದ

ಚರ್ಮವನ್ನು ಸೇರಿಕೊಂಡಂತೆ ಪೂರ್ತಿ ಚರ್ಮವನ್ನು 1 ನೇ ಆರೋಪಿಯನ್ನು ಬಂಧಿಸಿದೆವು ಎಂದು ಹೇಳಿದ ಸ್ಥಳದಲ್ಲಿ ಬರೆದ ಪಂಚನಾಮೆಯಲ್ಲಿ ನಮೂದಿಸಿದ್ದೆನೆ. ಭ್ರೂಣಕ್ಕೆ ಗುಂಡು ತಗಲಿಲ್ಲ. ಅದು ಬೆಳೆದ ಭ್ರೂಣ ಆಗಿತ್ತು. ಅದು ಹೊಟ್ಟೆಯ ಭಾಗವನ್ನು ಶೇಕಡ 90 ಆವರಿಸಿರುತ್ತದೆ ಎಂದರೆ ಸರಿ.

36. ನಾನು ವಶಪಡಿಸಿಕೊಂಡ ಚರ್ಮ, ಕಾಲು, ಭ್ರೂಣ ನೀರಿನಲ್ಲಿ ಇತ್ತು. ತಲೆ ಹೊರಗಡೆ ಇದ್ದು, ನೀರಿನಲ್ಲಿ ಇರಲಿಲ್ಲ. ಚರ್ಮ, ಕಾಲು ಹಾಗೂ ಭ್ರೂಣ ನೀರಿನಿಂದ ಕೂಡಿತ್ತು ಎಂದು ಪಂಚನಾಮೆಯಲ್ಲಿ ಬರೆದಿಲ್ಲ. ಭ್ರೂಣದ ಮೇಲೆ ದ್ರವದಿಂದ ಲೇಪನವಾದದ್ದು ಇರಲಿಲ್ಲ. ಭ್ರೂಣ ಎಣ್ಣೆಯುಕ್ತವಾಗಿರಲಿಲ್ಲ. ಒಂದೇ ಭ್ರೂಣ ಇತ್ತು. ಭ್ರೂಣಕ್ಕೆ ಕೂದಲು ಇದ್ದು, ಅದು ಭ್ರೂಣದ ಮೇಲ್ಮೈಗೆ ನೀರು ತಾಗಿ ಅಂಟಿಕೊಂಡಂತೆ ಇತ್ತು. ಆ ವಿಚಾರ ಪಂಚನಾಮೆಯಲ್ಲಿ ನಮೂದಿಸಿಲ್ಲ. ಭ್ರೂಣವನ್ನು ತೂಕ ಮಾಡಿ ತೂಕ ನಮೂದಿಸಿಲ್ಲ. ತಲೆ ಭಾಗ ರಕ್ತಸಿಕ್ತವಾಗಿತ್ತು ಎಂದು ಪಂಚನಾಮೆಯಲ್ಲಿ ಹೇಳಿಲ್ಲ. ಅದರ ಕರಳುಗಳು ವಶಪಡಿಸಿಕೊಂಡಿಲ್ಲ. ನನ್ನ ಪ್ರಕಾರ ಆ ಕಡವೆ 50 ರಿಂದ 60 ಕೆ ಜಿ ಇದ್ದಿರಬಹುದು. ಆ ರೀತಿ ಕೂಡ ಪಂಚನಾಮೆಯಲ್ಲಿ ಹೇಳಿಲ್ಲ. ಕಡವೆಗೆ ಚರ್ಮದಲ್ಲಿ ಒಂದೇ ಗುಂಡು ತಗುಲಿದ ರೀತಿ ಇತ್ತು. ಒಂದು ಕಡೆ ಮಾತ್ರ ಗುಂಡು ತಗುಲಿದ ರೀತಿ ಇತ್ತು. ಅದು ಇನ್ನೊಂದು ಕಡೆಯಿಂದ ತೂರಿಹೋದ ಕುರುಹು ಇರಲಿಲ್ಲ. ಆರೋಪಿಗಳಲ್ಲಿ ಗುಂಡು ಕಡವೆಯ ಮಾಂಸದಲ್ಲಿ ಇದ್ದ ಬಗ್ಗೆ ವಿಚಾರಣೆ ಮಾಡಿದ್ದೇವೆ. ಗುಂಡು ಜಪ್ತಿ ಮಾಡಿಲ್ಲ. ಆ ವಿಚಾರ ಫಿರ್ಯಾದಿ ಪಂಚನಾಮೆ ಹಾಗೂ ಹೇಳಿಕೆಗಳಲ್ಲಿ ಹೇಳಿಲ್ಲ. ನಾಲ್ಕು ಕಾಲುಗಳು ಎಷ್ಟು ಉದ್ದವಾಗಿತ್ತು ಎಂದು ಅಳತೆ ಮಾಡಿ

ಪಂಚನಾಮೆಯಲ್ಲಿ ನಮೂದಿಸಿಲ್ಲ. ಕಡವೆ ಕಾಲುಗಳನ್ನು ಯಾವ ಭಾಗದಲ್ಲಿ ಕತ್ತರಿಸಲಾಗಿತ್ತು ಎಂದು ಪಂಚನಾಮೆಯಲ್ಲಿ ಹೇಳಿಲ್ಲ. ಕಾಲುಗಳನ್ನು ತೂಕ ಮಾಡಿಲ್ಲ.

37. ಕೋವಿಯನ್ನು ಅದರಲ್ಲಿರುವ ಹಸ್ತಮುದ್ರೆ ಕಂಡು ಹಿಡಿಯಲು ಆ ರೀತಿ ಕ್ರಮ ಜರುಗಿಸಿಲ್ಲ. ಕೋವಿಯನ್ನು ಆರೋಪಿಯಿಂದ ಮಂಜುನಾಥನ ಕೈಗೆ ನೀಡಿರುತ್ತಾರೆ. ಕೋವಿಯ ಮೇಲೆ ಜಪ್ತು ಮಾಡಿದ ಬಗ್ಗೆ ಪಂಚರು ಹಾಗೂ ನಮ್ಮ ಸಹಿಗಳು ಇರುವ ಚೀಟಿ ಅಂಟಿಸಿಲ್ಲ. ನ್ಯಾಯಾಲಯದ ಮುಂದೆ ಇರುವ ಕೋವಿಯಲ್ಲಿರುವ ಎರಡು ಗಜ ಪಟ್ಟಿಗಳು ಇದೆ ಎಂದರೆ ಸರಿ. ಪಂಚನಾಮೆಯಲ್ಲಿ ಕೋವಿಯಲ್ಲಿರುವ ಎರಡು ಗಜ ಪಟ್ಟಿಗಳು ಇತ್ತು ಎಂದು ಹೇಳಿಲ್ಲ. ಕೋವಿಯ ಉದ್ದವನ್ನು ಕೂಡ ಪಂಚನಾಮೆಯಲ್ಲಿ ಹೇಳಿಲ್ಲ. ಕೋವಿಯ ಕೈಹಿಡಿ/ದಸ್ತು ಮರದ್ದು ಹಾಗೂ ಅದರ ಬಣ್ಣ ಯಾವ ಮರದ್ದು ಎಂದು ನಾನು ಪಂಚನಾಮೆಯಲ್ಲಿ ಹೇಳಿಲ್ಲ. ನ್ಯಾಯಾಲಯದ ಮುಂದೆ ಇರುವ ಕೋವಿಯ ದಸ್ತು ಸೀಸಂ ಮರದ್ದು ಹಾಗೂ ಅದರ ಬಣ್ಣ ಸೀಸಂ ಮರದ ಕಟ್ಟಿಗೆಯ ಬಣ್ಣ ಇರುತ್ತದೆ. ಆ ಕೋವಿಗೆ ಗಜ ಇದ್ದು, ಆ ಗಜ ಎಷ್ಟು ಉದ್ದದ್ದು ಎಂದು ಪಂಚನಾಮೆಯಲ್ಲಿ ಹೇಳಿಲ್ಲ. ನ್ಯಾಯಾಲಯದ ಮುಂದೆ ಇರುವ ಕೋವಿಯನ್ನು ನಾನು ಜಪ್ತು ಮಾಡಿಲ್ಲ ಎಂದರೆ ಸರಿಯಲ್ಲ. ಕೋವಿಯ ದಸ್ತುನಲ್ಲಿ ಸಿಡಿತಲೆ (ಕೇಪು) ಇಡುವ ಜಾಗ ಇತ್ತಾ ಹಾಗೂ ಅದರಲ್ಲಿ ಎನು ವಸ್ತು ಇತ್ತಾ ಎಂದು ಗೊತ್ತಿಲ್ಲ. ನ್ಯಾಯಾಲಯದ ಮುಂದೆ ಇರುವ ಕೋವಿಯಲ್ಲಿ ಸಿಡಿತಲೆ (ಕೇಪು) ಇಡುವ ಜಾಗ ಇದೆ. ಆ ರೀತಿಯ ಜಾಗವನ್ನು ನಾನು ಈ ದಿನ ನ್ಯಾಯಾಲಯದ ಮುಂದೆ ಪ್ರಥಮವಾಗಿ ನೋಡುವುದು ಎಂದರೆ ಸರಿಯಲ್ಲ. ಕೋವಿಯ ದಸ್ತುನಲ್ಲಿ ಸಿಡಿತಲೆ (ಕೇಪು) ಇಡುವ ಜಾಗ ಇತ್ತು

ಎಂದು ನಾನು ಪಂಚನಾಮೆಯಲ್ಲಿ ನಮೂದಿಸಿಲ್ಲ. ಪಂಚನಾಮೆಯಲ್ಲಿ ಕೋವಿಯ ನಳಿಗೆಯ ಒಳಭಾಗದಲ್ಲಿ ಕಾರ್ಬನ್‌ಯುಕ್ತವಾಗಿತ್ತು ಎಂದು ನಮೂದಿಸಿಲ್ಲ.

38. ಶಸ್ತ್ರಗಾರ ಸಿಬ್ಬಂದಿಗಳು ನಾನು ಹೇಳಿದಂತ ಕೋವಿಯನ್ನು ಅನ್‌ಲೋಡ್ ಮಾಡಲು ಯಾವ ವಸ್ತುವನ್ನು ಉಪಯೋಗಿಸಿದ್ದಾರೆ ಎಂದು ಪಂಚನಾಮೆಯಲ್ಲಿ ಹೇಳಿಲ್ಲ. ಆ ಸಿಬ್ಬಂದಿಗಳು ಬಂದಾಗ ಕೇವಲ ಗನ್ ಪೌಡರ್ ನ್ನು ಮತ್ತು ಗುಂಡುಗಳನ್ನು ಮಾತ್ರ ಜಪ್ತು ಮಾಡಿಕೊಂಡಿದ್ದೇವೆ . ಕೇವಲ ಗನ್ ಪೌಡರ್ ನ್ನು ಮತ್ತು ಗುಂಡುಗಳನ್ನು ಉಪಯೋಗಿಸಿ ಕೋವಿಯನ್ನು ಲೊಡ್ ಮಾಡಲು ಆಗುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ಗನ್ ಪೌಡರ್ ನ್ನು ಮತ್ತು ಗುಂಡುಗಳನ್ನು ಉಪಯೋಗಿಸಿ ಕೋವಿಯನ್ನು ಲೊಡ್ ಮಾಡಬಹುದು ಎಂದು ನುಡಿಯುತ್ತಾರೆ. ಆರೋಪಿಯಿಂದ ಕೋವಿ ಲೊಡ್ ಮಾಡಲು ಬೇಕಾದಂತ ಗನ್ ಪೌಡರ್, ಗುಂಡುಗಳು ಹಾಗೂ ಇತರ ಪರಿಕರಗಳನ್ನು ಜಪ್ತು ಮಾಡಿಲ್ಲ. ಕೋವಿ ಲೋಡ್ ಆಗಿತ್ತು ಎಂದು ಆರೋಪಿ ಹೇಳಿದ ಆದಾರದಲ್ಲಿ ಗೊತ್ತಾಯಿತು. ನಾನು ಅದು ಲೊಡ್ ಆಗಿತ್ತಾ ಇಲ್ಲವಾ ಎಂದು ಪರಿಶೀಲಿಸಿಲ್ಲ. ಆರೋಪಿಯನ್ನು ಅದರ ಇನ್ನಿತರ ಪರಿಕರಗಳು ಹಾಗೂ ಗನ್ ಪೌಡರ್, ಗುಂಡುಗಳು ಎಲ್ಲಿಟ್ಟಿದ್ದೀರಿ ಎಂದು ವಿಚಾರಿಸಿಲ್ಲ ಹಾಗೂ ಆರೋಪಿಯನ್ನು ಕರೆದುಕೊಂಡು ಹೋಗಿ ತಪಾಸಣೆ ಮಾಡಿಲ್ಲ. ಆರೋಪಿಯಿಂದ ಹೆಡ್ ಲೈಟ್‌ನ್ನು ಕೂಡ ಜಪ್ತು ಮಾಡಲು ಕರೆದುಕೊಂಡು ಹೋಗಿ ತಪಾಸಣೆ ಮಾಡಿಲ್ಲ.

ಸಿ.ಸಿ.ನಂ.17/2022

ಪಿ.ಡಬ್ಲ್ಯೂ-1

ಸಿ.ಡಬ್ಲ್ಯೂ-1

(ವಕೀಲರ ವಿನಂತಿಯ ಮೇರೆಗೆ ಮುಂದುವರಿದ ಪಾಟಿ ಸವಾಲನ್ನು ಮುಂದುಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ.

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಅಂಕೋಲಾ.